# ಶ್ರೀ ಶಾರದಾ
# Shree Sharada

KANNADA MONTHLY

॥ ಧಿಯೋ ಯೋನಃ ಪ್ರಚೋದಯಾತ್ ॥

ಬೆಲೆ ರೂ.2.50

D.O.P - 15th of every month at Udupi Head Office



ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ

ನಿಮ್ಮ ಮೊಬೈಲ್‌ಗೆ

STHANIKA

PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ

ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ



RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844

Volume 24 | Issue 2 | RNI No. KARKAN/2000/2758 UDUPI | FEBRUARY 2023 | Price : Rs.2.50


॥ ಶ್ರೀ ಶಾರದಾಂಬಾಂ ಪ್ರಣತೋಸ್ಮಿ ನಿತ್ಯಮ್ ॥

## ಶ್ರೀ ಶಾರದಾ ಮಂದಿರ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576102









ಭಗವದ್ಭಕ್ತರೇ,

ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯವರ್ಯೇತ್ಯಾದ್ಯನೇಕ ಬಿರುದಾವಲೀ ಸಮಲಂಕೃತರಾದ
ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾಪೀಠಾಧೀಶ್ವರ
ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ಭಾರತೀತೀರ್ಥಮಹಾಸ್ವಾಮಿಗಳ ಮತ್ತು
ತತ್ಕರಕಮಲಸಂಜಾತರಾದ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸ್ವಾಮಿಗಳ ಪರಮಾನುಗ್ರಹಪುರಸ್ಸರ
ಆಶೀರ್ವಾದಗಳಿಂದ ಶ್ರೀ ಕ್ಷೇತ್ರ ಶೃಂಗೇರಿ ಮಠದ ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಗಳಾದ
ಬ್ರಹ್ಮಶ್ರೀ ಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ

### ಶ್ರೀ ಶಾರದಾಂಬೆಯ ನೂತನ ಕೃಷ್ಣಶಿಲಾ ಬಿಂಬದ
## ಪ್ರತಿಷ್ಠಾಪನೆ–ಬ್ರಹ್ಮಕುಂಭಾಭಿಷೇಕ

ಸ್ವಸ್ತಿ । ಶ್ರೀ ಶಾಲಿವಾಹನಶಕವರ್ಷ 1945 ಶುಭಕೃತ್ ನಾಮ ಸಂವತ್ಸರದ
ಫಾಲ್ಗುನ ಶುದ್ಧ ಏಕಾದಶಿ ದಿನಾಂಕ 03.03.2023 ಶುಕ್ರವಾರ
ಪ್ರಾತಃಕಾಲ 8.00 ಗಂಟೆಗೆ ಶುಭಮೀನಲಗ್ನದಲ್ಲಿ ಸಂಪನ್ನಗೊಳ್ಳಲಿದೆ.

ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು
ನಮ್ಮೆಲ್ಲರ ಶ್ರದ್ಧಾಭಕ್ತಿಪುರಸ್ಸರವಾದ ಪ್ರಾರ್ಥನೆಯನ್ನು ಮನ್ನಿಸಿ, ಶ್ರೀ ಶಾರದಾ ಮಂದಿರಕ್ಕೆ
ದಯಮಾಡಿಸಿ ತಮ್ಮ ಅಮೃತಹಸ್ತಗಳಿಂದ ಈ ಕಾರ್ಯಕ್ರಮವನ್ನು ನೆರವೇರಿಸಲಿದ್ದಾರೆ.

ಆಸ್ತಿಕ ಬಂಧುಗಳಾದ ತಾವೆಲ್ಲ ಈ ಮಹತ್ಕಾರ್ಯದಲ್ಲಿ ಪಾಲ್ಗೊಂಡು
ತನುಮನಧನಗಳಿಂದ ಸಹಕರಿಸಿ, ಶ್ರೀ ಶಾರದಾಂಬೆಯ ಮತ್ತು ಶ್ರೀಜಗದ್ಗುರುಗಳ
ಅಪಾರಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಸರ್ವರಿಗೂ ಆದರದ ಸ್ವಾಗತ**

ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ
ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)
ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.
ದೂರವಾಣಿ : 0820–2958444, 8971185844

**ಸೇವೆಗಳ ವಿವರ : ಕಲಶ ಸೇವೆ ರೂ.2,000, ಸರ್ವಸೇವೆ ರೂ.5,000**

ಭಕ್ತಾದಿಗಳು ವಸ್ತುರೂಪದಲ್ಲಿ ಹೊರೆಕಾಣಿಕೆ ನೀಡಬಹುದು.

## ಕಾರ್ಯಕ್ರಮಗಳ ವಿವರ

**26.02.2023 ಆದಿತ್ಯವಾರ**
: ಸಾಯಂಕಾಲ 6 ಗಂಟೆಗೆ ನೂತನ ವಿಗ್ರಹ ಶ್ರೀ ಶಾರದಾ ಮಂಟಪಕ್ಕೆ ಮೆರವಣಿಗೆಯ ಮೂಲಕ ಆಗಮನ

**27.02.2023 ಸೋಮವಾರ**
: ಸಾಯಂಕಾಲ ನೂತನ ಬಿಂಬಪರಿಗ್ರಹ, ಜಲಾಧಿವಾಸಾದಿ ವಿಧಿಗಳು

**28.02.2023 ಮಂಗಳವಾರ**
: ಶ್ರೀ ಶಾರದೆಗೆ ಪಂಚವಿಂಶತಿಕಲಶಾತ್ಮಕ ಅನುಗ್ರಹಕಲಶಾಭಿಷೇಕ. ಸಾಯಂಕಾಲ ಸಂಹಾರತತ್ತ್ವಹೋಮಪುರಸ್ಸರವಾಗಿ ಕಲಾಸಂಕೋಚ, ಬಿಂಬ–ಪೀಠಗಳ ಉದ್ಧಾರ.

**01.03.2023 ಬುಧವಾರ**
: ಪೂರ್ವಾಹ್ನ 9 ಗಂಟೆಗೆ ಗಣಪತಿಹೋಮ, ನವಗ್ರಹಹೋಮ, ಮೃತ್ಯುಂಜಯ ಹೋಮಗಳು. ಸಾಯಂಕಾಲ ಪ್ರಾಸಾದಶುದ್ಧಿ–ರಾಕ್ಷೋಘ್ನಹೋಮ–ವಾಸ್ತುವಿಧಿಗಳು

**02.03.2023 ಗುರುವಾರ**
: ಬಿಂಬಶುದ್ಧಿ, ಪೀಠಶುದ್ಧಿ, ಪ್ರತಿಷ್ಠಾಧಿವಾಸಾದಿಕರ್ಮಗಳು. ಸಾಯಂಕಾಲ 108 ಕಲಶಸ್ಥಾಪನೆ, ಅಧಿವಾಸ ಹೋಮ.

**03.03.2023 ಶುಕ್ರವಾರ**
: ಪ್ರಾತಃಕಾಲ ಗಂಟೆ 7.28 ರಿಂದ 8.12ರವರೆಗೆ ಸಲ್ಲುವ ಶುಭಮೀನಲಗ್ನದಲ್ಲಿ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಅಮೃತಹಸ್ತದಿಂದ ಶ್ರೀ ಶಾರದಾಂಬೆಯ ಬಿಂಬಪ್ರತಿಷ್ಠೆ, ಕಲಶಾಭಿಷೇಕ, ಮಹಾಪೂಜೆ, ಭೋಜನಪ್ರಸಾದ

### ಶ್ರೀಮಜ್ಜಗದ್ಗುರುಗಳ ಕಾರ್ಯಕ್ರಮ :

**02.03.2023 ಗುರುವಾರ**
: ಸಾಯಂಕಾಲ ಗಂಟೆ 6.00ಕ್ಕೆ ಶ್ರೀ ಶಾರದಾ ಮಂಟಪಕ್ಕೆ ಆಗಮನ, ಸ್ವಾಗತ, ಧೂಳೀಪಾದಪೂಜೆ. ರಾತ್ರಿ ಶ್ರೀ ಚಂದ್ರಮೌಳೀಶ್ವರ ಪೂಜೆ.

**03.03.2023 ಶುಕ್ರವಾರ**
: ಪ್ರಾತಃಕಾಲ ಶ್ರೀ ಶಾರದಾಂಬೆಯ ಬಿಂಬಪ್ರತಿಷ್ಠೆ, ಕಲಶಾಭಿಷೇಕ, ಮಹಾಪೂಜೆ. ಪಾದಪೂಜಾಸೇವೆಗಳು, ಭಿಕ್ಷಾವಂದನಸೇವೆಗಳು.
ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲಾ ವ್ಯಾಪ್ತಿಯ ಶೃಂಗೇರಿ ಭಜನಾಮಂಡಳಿಗಳಿಂದ ಗಂಟೆ 9.00 ರಿಂದ 10.30ರವರೆಗೆ ಭಜನಾಸಮರ್ಪಣೆ, ಶ್ರೀ ಶ್ರೀಗಳಿಂದ ಆಶೀರ್ವಚನ. ಸಾಯಂಕಾಲ 4.30ಕ್ಕೆ ಕಡಿಯಾಳಿ ಶ್ರೀ ಮಹಿಷಮರ್ದಿನೀ ದೇವಸ್ಥಾನದ ದರ್ಶನ, ಸಾರ್ವಜನಿಕರಿಂದ ಗೌರವ ಸಮರ್ಪಣೆ, ಆಶೀರ್ವಚನ
ರಾತ್ರಿ ಶ್ರೀ ಶಾರದಾ ಮಂದಿರದಲ್ಲಿ ಶ್ರೀ ಚಂದ್ರಮೌಳೀಶ್ವರ ಪೂಜೆ.

**04.03.2023 ಶನಿವಾರ**
: ಪ್ರಾತಃಕಾಲ ಶ್ರೀ ಜಗದ್ಗುರುಗಳ ಸಮಸ್ತ ಶಿಷ್ಯಸಮುದಾಯದವರಿಂದ ಗುರುಗಳ ಭೇಟಿ, ಪಾದಪೂಜಾ, ಭಿಕ್ಷಾವಂದನ ಸೇವೆಗಳು, ಸಾಯಂಕಾಲ ಮಂತ್ರಾಕ್ಷತೆ. ಶಿವಪಾಡಿ–ಮಣಿಪಾಲದ ಶ್ರೀ ಉಮಾಮಹೇಶ್ವರ ಕ್ಷೇತ್ರಕ್ಕೆ ಪ್ರಯಾಣ.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ – 576 102.

## ಮಹಾಶಿವರಾತ್ರಿಯ ಆಮಂತ್ರಣ



ಭಕ್ತಾಭಿಮಾನಿಗಳೇ,

ತಾ.18-02-2023, ಶನಿವಾರ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 9 ಗಂಟೆಯಿಂದ ರುದ್ರಪಾರಾಯಣ, ರುದ್ರಾಭಿಷೇಕ, ಲಲಿತಾಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘುಪಹಾರ ದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

–ಆಡಳಿತ ಮಂಡಳಿ

ಶ್ರೀಮತಿ ಸುಕನ್ಯಾ ಹಾಗೂ ಶ್ರೀ ಪಿ. ಸತೀಶ್ ರಾವ್, ಚಿಟ್ಪಾಡಿ ಇವರು
ಈ ಎಲ್ಲಾ ಕಾರ್ಯಕ್ರಮದ ಪ್ರಾಯೋಜಕತ್ವ ವಹಿಸಿರುವರು.

## ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | | |
|---|---|---|
| 27 | ಶ್ರೀ ವಿನಯ್ ಪಿ. ಸಂತೂರ್ಕರ್, ಯು.ಎಸ್.ಎ. | 4,900 $ (ಸುಮಾರು ರೂ.4,04,000/–) |
| 28 | ಶ್ರೀ ಟಿ ಎಸ್ ಶಾನುಭೋಗ್, ಒರಿಸ್ಸಾ | 1.00.000/– |
| 29 | ಶ್ರೀ ಸಂತೋಷಕುಮಾರ್, ಕಿಲ್ಲೂರು | 1,00,000/– |
| 30 | ಶ್ರೀಮತಿ ವಿಶಾಲಾಕ್ಷಿ ಕೆ.ಎಸ್.ವೆಂಕಟೇಶ ರಾವ್, ಬೆಂಗಳೂರು | 1,00,000/– |
| 31 | ಶ್ರೀ ರಘುರಾಮ ರಾವ್ ಕಾವು, ಮುಂಬಯಿ | 2,00,000/– |
| 32 | ಶ್ರೀಮತಿ ಸರಸ್ವತಿ ಶಿವರಾವ್, ಬೆಂಗಳೂರು | 1,00,000/– |
| 33 | ಶ್ರೀಮತಿ ಸ್ನೇಹಾ ರಾವ್, ಬೆಂಗಳೂರು | 1,00,000/– |

(ಮುಂದುವರಿಯುವುದು....)

**ಸಮಾಜ ಬಾಂಧವರ ಉದಾರ ಧನಸಹಾಯವನ್ನು ನಿರೀಕ್ಷಿಸುತ್ತೇವೆ.**

*'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c no 0182500101876001, IFSC code - KARB 00 00 018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್ / ಡಿಡಿ / ನೆಫ್ಟ್ ಇತ್ಯಾದಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆ.

*80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನನಗೆ ಕಳಿಸಬೇಕಾಗಿ ವಿನಂತಿ. PAN ಸಂಖ್ಯೆ ಹಾಗೂ ವಿಳಾಸ ಬೇಕು.


**ವಾಗೀಶ ಎಸ್. ಶಾಸ್ತ್ರೀ**
ಧರ್ಮಾಧಿಕಾರಿ, ಉಡುಪಿ (9449591513)
ವನಸುಮ, ಶ್ರೀದುರ್ಗಾದೇವಸ್ಥಾನದ ಹತ್ತಿರ, ಪುತ್ತೂರು ಉಡುಪಿ 576105

# ಕೋಟೆಕಾರಿನಲ್ಲಿ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವರವರಿಗೆ ಸಾರ್ವಜನಿಕ ಅಭಿನಂದನೆ



ಕೋಟೆಕಾರು ಶೃಂಗೇರಿ ಮಠದಲ್ಲಿ ಭವ್ಯವಾದ ದೇವಸ್ಥಾನ, ಸಭಾಂಗಣ, ಪಾಠಶಾಲೆ, ವಿದ್ಯಾರ್ಥಿಗಳಿಗೆ ಅನುಕೂಲವಾದ ವಸತಿ ಇವೆಲ್ಲವೂ ಶೀಘ್ರವೇ ಆರಂಭವಾಗಲಿವೆ. ಈ ಹಿಂದೆ ಚೆನ್ನೈನಿಂದ ಶೃಂಗೇರಿ ಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಿಗೆ ಕೋಟೆಕಾರು ಕೇಂದ್ರ ಸ್ಥಾನ ಆಗಬೇಕು ಎನ್ನುವ ಅಪೇಕ್ಷೆ ಗುರುಗಳಲ್ಲಿದ್ದರೂ ಇದೀಗ ಹೊಸಯೋಜನೆಗೆ ಶೀಘ್ರವೇ ಚಾಲನೆ ನೀಡಲಿದ್ದಾರೆ ಎಂದು ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳು ಪದ್ಮಶ್ರೀ ಪುರಸ್ಕೃತ ಡಾ. ವಿ.ಆರ್. ಗೌರಿಶಂಕರ್ ಅಭಿಪ್ರಾಯಪಟ್ಟರು. ಅವರು ಕೋಟೆಕಾರು ಭಾರತೀ ತೀರ್ಥ ಕೃಪಾ ಧರ್ಮಾಧಿಕಾರಿ ಶ್ರೀ ಬೊಳ್ಳಾವ ಸತ್ಯಶಂಕರ ಅಭಿನಂದನಾ ಸಮಿತಿ ವತಿಯಿಂದ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಅನುಗ್ರಹದಿಂದ ಕೋಟೆಕಾರು ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿ ಬೊಳ್ಳಾವ ಸತ್ಯಶಂಕರ ನಾರಾಯಣಿ ಬೊಳ್ಳಾವ ದಂಪತಿಗೆ ಶ್ರೀಗುರುಗಳ ಅನುಗ್ರಹ ಪತ್ರ ಶ್ರೀ ಚಕ್ರ ಮತ್ತು ಸಾರ್ವಜನಿಕ ಅಭಿನಂದನೆ ಸಲ್ಲಿಸಿ ಮಾತನಾಡಿದರು.

ನೂತನ ಯೋಜನೆ ಕುರಿತು 2017ರ ಮಾರ್ಚ್ ತಿಂಗಳಿನಲ್ಲಿ ಸಭೆ ನಡೆದಿತ್ತಾದರೂ, ಕೊರೋನಾದಿಂದಾಗಿ ಹಿಂದೆ ಸರಿದಿತ್ತು. ಇದೀಗ ಮತ್ತೆ ಗುರುಗಳು ಅಪೇಕ್ಷಿಸಿದ್ದು, ಶೀಘ್ರವೇ ಎಲ್ಲರ ಸಹಕಾರದಿಂದ ಅದು ತಲೆ ಎತ್ತಲಿದೆ ಎಂದ ಅವರು, ಗುರುಗಳ ಹೆಸರಿನ ಪುರಸ್ಕಾರವನ್ನು ಬೊಳ್ಳಾವರಿಗೆ ನೀಡುವ ಮೂಲಕ ಸಜ್ಜನಿಕೆಯ ಸ್ನೇಹಿತನಿಗೆ ಗೌರವ ಸಂದಿದೆ. ರಾಜನಾದವನ ಹಿಂದೆ ಪಾಪವೂ ಬರುವುದು ಪುಣ್ಯವೂ ಬರುತ್ತದೆ. ಹಾಗೆಯೇ ಉತ್ತಮ ಕಾರ್ಯಗಳನ್ನು ಕೈಗೊಂಡಾಗ ಆಪಾದನೆಗಳು ಸಾಮಾನ್ಯ. ವರ್ಷದ ಜನಿವಾರ ಬದಲಾಯಿಸುವ ವೇಳೆ ಪ್ರಾಯಶ್ಚಿತ ಮಂತ್ರ ಪಠಣ ಕೈಗೊಳ್ಳುತ್ತೇವೆ. ಹಾಗಾಗಿ ಅಂತಹ ಮಾತುಗಳಿಗೆ ಕಿವಿಗೊಡದೆ ಮುಂದೆ ಸಾಗಬೇಕಿದೆ ಎಂದರು.

1987ರಲ್ಲಿ ಹುಂಡಿ ಹಣವನ್ನು ಬ್ಯಾಂಕ್ ವತಿಯಿಂದಲೇ ಎಣಿಸುವ ಕ್ರಾಂತಿಕಾರಕ ಹೆಜ್ಜೆಗೆ ಹಲವು ಆಪಾದನೆಗಳು ತನ್ನ ಮೇಲೆ ವ್ಯಕ್ತವಾಯಿತಾದರೂ ಇದೀಗ ಸರಕಾರಿ ವ್ಯವಸ್ಥೆಯಲ್ಲದೆ ಹಲವು ಧಾರ್ಮಿಕ ಕ್ಷೇತ್ರಗಳಲ್ಲೂ ಅದೇ ವ್ಯವಸ್ಥೆ ಪರಿಪಾಲನೆಯಲ್ಲಿದೆ ಎಂದರು. ಕರ್ನಾಟಕ ಲೋಕ ಸೇವಾ ಆಯೋಗದ ಮಾಜಿ ಅಧ್ಯಕ್ಷ ಟಿ. ಶ್ಯಾಮ ಭಟ್, ಸಮಿತಿ ಅಧ್ಯಕ್ಷ ಎಂ.ಆರ್. ವಾಸುದೇವ ಮಾತನಾಡಿದರು. ಕರ್ನಾಟಕ ಬ್ಯಾಂಕ್ ಅಧ್ಯಕ್ಷ ಪ್ರದೀಪ್ ಕುಮಾರ್ ಪಂಜ, ಬೆಂಗಳೂರು ಅಖಿಲ ಕರ್ನಾಟಕ ಬ್ರಾಹ್ಮಣರ ಮಹಾಸಭಾದ ಅಧ್ಯಕ್ಷ ಅಶೋಕ ಹಾರ್ನಹಳ್ಳಿ, ಶ್ರೀ ಶೃಂಗೇರಿ ಮಠದ ಉಡುಪಿ ಪ್ರಾಂತದ ಧರ್ಮಾಧಿಕಾರಿ ಎಸ್. ವಾಗೀಶ ಶಾಸ್ತ್ರಿ, ಸೋಮೇಶ್ವರದ ಶ್ರೀ ಸೋಮನಾಥ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಿ.ಬಿ. ರವೀಂದ್ರನಾಥ ರೈ, ಬೆಂಗಳೂರು ನಿವೃತ್ತ ಡಿ.ವೈ.ಎಸ್ಪಿ ಕೆ.ಎಲ್. ರಾವ್, ಪುತ್ತೂರು ಶಿವಬ್ರಾಹ್ಮಣ ಸಮಾಜ ಸೇವಾ ಸಂಘದ ಅಧ್ಯಕ್ಷ ಎನ್.ಕೆ. ಜಗನ್ನಿವಾಸ ರಾವ್, ಡೊಂಗರಕೇರಿ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತ ಮೊಕ್ತೇಸರ ವರದರಾಯ ಸುಬ್ರಾಯ ನಾಗ್ವೇಕರ್, ಮಂಗಳೂರು ಶ್ರೀ ಶಂಕರ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಕೆ. ಕೇಶವ ಆಚಾರ್ಯ, ಮೈಸೂರು ಮಹಿಳಾ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಸಾಯಿನಾಥ ಮಲ್ಲಿಗೆಮಾಡು, ಕಾಳಿಕಾಂಬ ದೇವಸ್ಥಾನದ ಆಡಳಿತ ಮೊಕ್ತೇಸರ ಶ್ರೀ ಸುಂದರ್ ಆಚಾರಿ ಮುಖ್ಯ ಅತಿಥಿಗಳಾಗಿದ್ದರು.

ಗುರುಗಳ ಸಂದೇಶವನ್ನು ವಿದ್ಯಾಶಂಕರ್ ಬೊಳ್ಳಾವ ವಾಚಿಸಿದರು. ಕಾರ್ಯಾಧ್ಯಕ್ಷ ಮದುಸೂಧನ ಆಯರ್ ಸ್ವಾಗತಿಸಿದರು. ಮೋಹನ್ ರಾವ್ ಕೊಯ್ಲ ನಿರೂಪಿಸಿದರು. ನಾರಾಯಣ ಭಟ್ ಕೈಯ್ಯೂರ್ ವಂದಿಸಿದರು. ಹಲವು ಹೋರಾಟದ ಫಲವಾಗಿ ಜಾಗವನ್ನು ಪಡೆದುಕೊಂಡು, ಮೊಗವೀರ ಮುಖಂಡರ ಧೈರ್ಯದಿಂದ ಕೋಟೆಕಾರಿನಲ್ಲಿ ಸನ್ನಿಧಾನ ಸ್ಥಾಪಿಸಲು ಸಾಧ್ಯವಾಗಿದೆ. ಗುರುಗಳು ಸನ್ನಿಧಾನದಲ್ಲಿ ಒಂದು ದಿನ ವಿಶ್ರಾಂತಿಗೆ ಬಂದ ಸಂದರ್ಭ ಧಾರ್ಮಿಕ ಸನ್ನಿಧಾನಕ್ಕೆ ಸ್ಥಳಾವಕಾಶ ಕೋರಿದಂತೆ ಹೃದಯಪೂರ್ವಕವಾಗಿ ಒಪ್ಪಿಕೊಂಡ ಪರಿಣಾಮ ಇದೀಗ ಸ್ಥಳೀಯ 45 ಸಮಾಜದವರನ್ನು ಶೃಂಗೇರಿ ಮಠಕ್ಕೆ ಸಂಪರ್ಕ ಕಲ್ಪಿಸುವಲ್ಲಿ ಸಹಕಾರಿಯಾಗಿರುವೆನು. ಚಾತುರ್ಮಾಸಕ್ಕಾಗಿ ಚೆನ್ನೈನಿಂದ ಬಂದವರು ಸೇರಿದಂತೆ ಸುತ್ತಲ ಜನರಿಗೆ ಜ್ಞಾನ ಕಲ್ಪಿಸಿರುವ ಯೋಗ ತನ್ನದು. ಶ್ರೀ ಗುರು ಸೇವೆಯನ್ನು ಶ್ರದ್ಧೆಯಿಂದ ಮಾಡಿರುವೆ. ನನ್ನ ಸಾಧನೆಯ ಹಿಂದೆ ಪತ್ನಿ ನಾರಾಯಣಿ ಪಾತ್ರವೂ ಇದೆ.

ಸಂಪಾದಕ ಮಂಡಳಿ

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★
ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

## ‘ಬಾಳಿನ ಗಿಡ’ – 1949ರ ಅತ್ಯುತ್ತಮ ಕಾದಂಬರಿ

– ವೈ. ಮೋಹನ ರಾವ್




ಸುಂದರವಾದ ಸಾಮಾಜಿಕ ಕಾದಂಬರಿ ‘ಬಾಳಿನ ಗಿಡ’ ದೇಶ ಸ್ವತಂತ್ರವಾದ ಹೊಸದರಲ್ಲಿ ಅಂದರೆ 1949ರಲ್ಲಿ ಬರೆದದ್ದು. ಈ ಕಾದಂಬರಿ 1954ರಲ್ಲಿ ಎರಡನೇ ಮುದ್ರಣ ಕಂಡಿದೆ. ಲೇಖಕರು ತೀರಿಕೊಂಡ ಬಳಿಕ 1955, 1959, 1960, 1962, 1969 ರವರೆಗೆ ಒಟ್ಟು 7 ಮುದ್ರಣಗೊಂಡಿದೆ. 50 ವರ್ಷಗಳ ಬಳಿಕ 2019ರಲ್ಲಿ ಎಂಟನೆಯ ಮುದ್ರಣವನ್ನು ಕಾಣುವುದು ವಿಶೇಷ ಸಂಗತಿಯೇ ಸರಿ. 1974ರಲ್ಲಿ ಈ ಕೃತಿಯನ್ನು ಓದಿ ಖುಷಿಯಿಂದ ಬೈಲಕೆರೆ ಗೋವಿಂದ ರಾವ್ (ಬೈಲಕೆರೆ ನಾರಾಯಣ ರಾವ್ ಇವರ ಅಣ್ಣ) ನಿವೃತ್ತ ಬ್ಯಾಂಕ್ ಉದ್ಯೋಗಿ ಹೊರರಾಜ್ಯದಲ್ಲಿದ್ದ ಲೇಖಕ ಹರಿದಾಸ ರಾವ್ ಅವರ ಮಕ್ಕಳನ್ನು ಹುಡುಕಿ ಪ್ರಕಾಶಕರ ಮನವೊಲಿಸಿ ಈ ಕಾದಂಬರಿ ಎಂಟನೇ ಮುದ್ರಣಗೊಳ್ಳಲು ಕಾರಣರಾಗಿರುವುದು ಇನ್ನೊಂದು ರೋಚಕ ಸಂಗತಿ.

ಸ್ವಾತಂತ್ರ್ಯಪೂರ್ವದ ಅಪೂರ್ವ ಕಾದಂಬರಿ ‘ಬಾಳಿನ ಗಿಡ’ ಲೇಖಕರಾದ ಎಂ. ಹರಿದಾಸ ರಾವ್ ದಕ್ಷಿಣ ಕನ್ನಡದ ಮಾರ್ಪಳ್ಳಿಯಲ್ಲಿ 05–01–1919ರಲ್ಲಿ ಜನಿಸಿದರು. ಅವರದು ಬಡಕುಟುಂಬ. ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮುಂದೆ ಓದಲಾಗದೆ

(3ನೇ ಪುಟಕ್ಕೆ...)

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ “ಗೃಹ ಸಾಲ” ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ
ಉಳಿತಾಯ ಖಾತೆ : 5% ನಿತ್ಯನಿಧಿ ಠೇವಣಿ : 5%
46 ದಿನಗಳಿಂದ 364 ದಿನಗಳು : 6%, 1 ವರ್ಷ ಮತ್ತು ಹೆಚ್ಚಿನ ಅವಧಿಗೆ : 8.5%
(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
“ಶ್ರೀರಂಗ”, ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

## ‘ಬಾಳಿನ ಗಿಡ’ – 1949ರ ಅತ್ಯುತ್ತಮ ಕಾದಂಬರಿ

■...2ನೇ ಪುಟದಿಂದ

ಹಳ್ಳಿಶಾಲೆಯ ಉಪಾಧ್ಯಾಯರಾದರು. ಸಾಹಿತ್ಯಾಭ್ಯಾಸದ ಆಸಕ್ತಿಯಿಂದ ಲೇಖನ ಕಲೆ ಬಹಳ ಸುಲಭವಾಗಿಯೇ ಅವರಿಗೆ ಒಲಿಯಿತು. ಮಂಗಳೂರು ಸೇರಿದ ಹರಿದಾಸರು ಪತ್ರಿಕಾಕ್ಷೇತ್ರಕ್ಕೆ ಲೇಖನಿಯ ದುಡಿಮೆಗಾಗಿ ಕಾಲಿರಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಕ್ಷೇತ್ರವೂ ತೀರ ಸೀಮಿತವಾಗಿ ತೋರಿತು. ಅದು ದ್ವಿತೀಯ ಘೋರ ಮಹಾಯುದ್ಧ ನಡೆಯುತ್ತಿದ್ದ ಕಾಲ. ಉತ್ಸಾಹಿ ಯುವಕ ಹರಿದಾಸರು ನಿಷ್ಠಾವಂತನಾದ ಸ್ವಾತಂತ್ರ್ಯಯೋಧನಾಗಿ ತಮ್ಮ ಕರ್ತವ್ಯವನ್ನು ಪಾಲಿಸಿದರು. ಅವರು ರಾಷ್ಟ್ರಪ್ರೇಮದಿಂದ ಉತ್ಸುಕರಾದರು. ಒಂದು ವರ್ಷದ ಕಠಿಣ ಕಾರಾಗ್ರಹ ಶಿಕ್ಷೆಯೂ ದೊರಕಿತು.

ಅನಂತರ ಹುಬ್ಬಳ್ಳಿಯಲ್ಲಿ ನೆಲೆನಿಂತ ಬರೆಹಗಾರ ಹರಿದಾಸರು ಪತ್ರಿಕೋದ್ಯಮವನ್ನೇ ವೃತ್ತಿಯಾಗಿ ಅವಲಂಬಿಸಿದರು. ‘ಸಂಯುಕ್ತ ಕರ್ನಾಟಕ’, ‘ನವಯುಗ’, ‘ಕರ್ಮವೀರ’, ‘ಕರ್ನಾಟಕ ಬಂಧು’ ಇವುಗಳ ಅಭಿವೃದ್ಧಿಗೆ ಅವರ ಬದುಕು ಮುಡಿಪಾಯಿತು. ತನ್ನ ಸಂಪಾದಕತ್ವದಲ್ಲೇ ‘ನವೋದಯ ಸಾಹಿತ್ಯ’ ವನ್ನು ಅವರು ಆರಂಭಿಸಿದರು. ಬರೆಯುವುದರ ಜೊತೆಗೆ ಸಂಘಟಕರಾಗಿಯೂ ಕಾರ್ಯನಿರ್ವಹಿಸಬೇಕಾಯಿತು. ಸಾಹಿತ್ಯದ ಜೋಳಿಗೆಯೊಡನೆ ಅವರು ಊರೂರು ಸಂಚಾರ ಮಾಡಿದರು. ಆದರೂ ಕಾಲಕಾಲಕ್ಕೆ ಪುಸ್ತಕಗಳನ್ನು ಪ್ರಕಟಿಸುವುದು ಸಂಸಾರವಂದಿಗರಾದ ಹರಿದಾಸರ ಮೇಧಾವಿಶಕ್ತಿಗೂ ಮೀರಿದ ಮಾತಾಗಿತ್ತು.

ಹರಿದಾಸರಾಯರು ಒಟ್ಟು 20ಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಬರೆದರು. ಅವರ ಮೊದಲ ಕೃತಿ 1941ರಲ್ಲೇ ಪ್ರಕಟವಾದ ‘ದ್ವಿತೀಯ ಮಹಾಯುದ್ಧ’. ಅವರ ಎರಡನೆಯ ಕೃತಿ ಸ್ಟಾಲಿನ್ನಿನ ಜೀವನ ಚರಿತ್ರೆ ‘ಉಕ್ಕಿನ ಮನುಷ್ಯ’. ಇತರ ಕೃತಿಗಳು  ‘ಎಚ್ಚೆತ್ತ ಆಗ್ನೇಯ ಏಷಿಯಾ’, ‘ಮರುಭೂಮಿಯ ಅರಬರು’ ಮತ್ತು ‘ಇಂದಿನ ಫಿಲಿಪ್ಪೈನ್ಸ್’, ‘ಕ್ರಿಸ್‌ಮಸ್ ಕಾಣಿಕೆ’, ‘ಹುಚ್ಚರ ಮನೆ’ ಮತ್ತು ಭಾರತೀಯ ಕಥೆಗಳು, ‘ಸ್ತ್ರೀ ನೀತಿ ಕಥೆಗಳು’, ‘ಭಟ್ಟಿ ವಿಕ್ರಮಾದಿತ್ಯನ ಕಥೆಗಳು’ ಮತ್ತು ‘ಅರೇಬಿಯನ್ ನೈಟ್ಸ್’ ಇವು ಇನ್ನಿತರ ಕೃತಿಗಳು. ಅಧ್ಯಯನದಲ್ಲಿ ಆಸಕ್ತರಾದ ಅವರ ಚಿಕಿತ್ಸಕ ಬುದ್ಧಿಗೆ ‘ಸಿರಿಕನ್ನಡ ಮಹಾಭಾರತ’ ಪ್ರತೀಕವಾಗಿದೆ. ‘ಹಸಿದ ಹಂಬಲ’, ಜರ್ಮನ್ ಕೃತಿಯ ಆಧಾರದ ಮೇಲೆ ಬರೆದ ಕಾದಂಬರಿ. ‘ಬದುಕಿನ ದಾರಿ’, ‘ಧಾರ್ವಾಡದ ಹುಡುಗಿ’, ‘ಕೈ ಹಿಡಿದ ಕಾವೇರಿ’ ಮತ್ತು ‘ಬಾಳಿನ ಗಿಡ’– ಇವು ಅವರು ಬರೆದ ನಾಲ್ಕು ಕಾದಂಬರಿಗಳು ಅವರು ಉತ್ತಮ ಭಾಷಾಂತಕಾರರು ಆಗಿದ್ದರು.

‘ಬಾಳಿನ ಗಿಡ’ ಹರಿದಾಸರಾಯರ ಕಾದಂಬರಿಗಳಲ್ಲಿ ಅತ್ಯುತ್ತಮವಾದ ಕೃತಿ. ಕಾರಂತರ ‘ಬೆಟ್ಟದ ಜೀವ’ ವನ್ನು ಓದುವಾಗ ಈ ಕೃತಿ ನೆನಪಾಗುತ್ತದೆ. ಕಥಾನಾಯಕ ಗೋವಿಂದರಾಯ ಉಡುಪಿ ಪಕ್ಕದ ಬೈಲೂರಿನಲ್ಲಿ ವಾಸವಿದ್ದ. ತನ್ನ ದೊಡ್ಡ ಮಗ ರಾಜ ಬೆಳ್ತಂಗಡಿಯ ಬಂಗಾಡಿಯಲ್ಲಿ ಖರೀದಿಸಿದ ಜಮೀನು ಉತ್ತು, ಬಿತ್ತು, ಬೆಳೆದ ಹೊಸ ಬದುಕು ಕಟ್ಟಿಕೊಳ್ಳುವ ಕಥಾಹಂದರ ಇಲ್ಲಿದೆ. ಕಾಡನ್ನು ಬೀಡು ಮಾಡಲು ಹೊರಟ ವಯೋವೃದ್ಧ ಸಾಧಕರೊಬ್ಬರ ಸಾಹಸ ಕಥೆ. ಬದುಕನ್ನು ಹಸನುಗೊಳಿಸಬೇಕೆಂಬ ಸಾಧನೆಯ ರಮ್ಯ ಚಿತ್ರ ಇಲ್ಲಿದೆ. ಬದುಕು ಛಿದ್ರವಾಗುತ್ತಿರುವ ನೋವಿನ ಚಿತ್ರಣವೂ ಇಲ್ಲಿದೆ. ಸಾಹಿತ್ಯವು ಬದುಕಿನ ಕಲಾತ್ಮಕ ಪ್ರತಿಬಿಂಬ ಎನ್ನುವಾಗ ಈ ಕಾದಂಬರಿ ಸಮರ್ಪಕವಾದ ಒಂದು ಕೃತಿ. ಸಮಾಜದ ಗೋಮುಖವ್ಯಾಘ್ರಗಳನ್ನು ಈ ಕಾದಂಬರಿಯಲ್ಲಿ ನಿರ್ಭಯವಾಗಿ ಬಯಲಿಗೆಳೆಯಲಾಗಿದೆ. ಈ ರೀತಿ ಪ್ರಸಿದ್ಧ ಕನ್ನಡ ಸಾಹಿತಿ ನಿರಂಜನ ಕೃತಿಯ ಮೊದಲಲ್ಲಿ ‘ದಿವಂಗತ ಹರಿದಾಸರಾಯರ ಜೀವನ ಮತ್ತು ಕೃತಿಗಳು’ ಎಂಬಲ್ಲಿ ಹೇಳಿರುವ ಕೆಲವು ಮಾತುಗಳು.

ತಮ್ಮ 37ನೇ ವಯಸ್ಸಿನಲ್ಲಿ ಕಾಹಿಲೆ ಮಲಗಿದ್ದ ಕೈ ಹಿಡಿದಾಕೆಯ ಕಡೆಗೆ ಔಷಧಿಯೊಡನೆ ಸೈಕಲನ್ನೇರಿ ಮನೆಗೆ ಹೋಗುತ್ತಿದ್ದರು. ದಾರಿಯಲ್ಲಿ ದೊಡ್ಡದೊಂದು ಮೋಟಾರು ಕಾರು ಅವರಿಗೆ ಎದುರು ಬಂದು ಅದರ ಚಕ್ರಕ್ಕೆ ಸಿಕ್ಕಿ (29.07.1954) ಕೊನೆಯುಸಿರೆಳೆದರು. ಅತೀ ಕಿರಿಯ ವಯಸ್ಸಿನಲ್ಲಿ ಹರಿದಾಸರಾಯರ ಬಾಳು ಹೀಗೆ ಕೊನೆಗೊಂಡಿತು.

‘ಬಾಳಿನ ಗಿಡ’ (ಮೊದಲನೆಯ ಮುದ್ರಣ) ಕಾದಂಬರಿಯ ‘ಲೇಖಕನ ಅರಿಕೆ’ ಯಲ್ಲಿ ಕೆಲವು ವಾಕ್ಯಗಳು  ಮಂಗಳೂರು, ಕೊಡಗು, ಕಾರವಾರ ಹಾಗೂ ಮೈಸೂರಿನ ಶಿವಮೊಗ್ಗ ಜಿಲ್ಲೆ ಹಾಗೂ ಮೊದಲಾದ ಈ ಮಲೆನಾಡು ಭಾಗಗಳಲ್ಲಿ ‘ಬಾಳಿನ ಗಿಡ’ ದಲ್ಲಿ ನಿರೂಪಿಸಿದಂತಹ ಅನೇಕ ಜನರುಂಟು. ಈ ಕಾದಂಬರಿಯ ನಾಯಕನು ಕಾಲ್ಪನಿಕ ವ್ಯಕ್ತಿಯಲ್ಲ. ದಕ್ಷಿಣಕನ್ನಡಿಗನಾದ ನಾನು ಜಿಲ್ಲೆಯ ಮಲೆನಾಡಿನಲ್ಲಿ ಆ ಜೀವವನ್ನು ಕಣ್ಣಾರೆ ಕಂಡಿದ್ದೇನೆ. ನಾನು ಬದುಕುವುದೆಷ್ಟು ಸತ್ಯವೋ ಅಷ್ಟೇ ಸತ್ಯ ಈ ಮಾತು. ದಕ್ಷಿಣ ಕನ್ನಡ ಜಿಲ್ಲೆಯ ಕಥೆಯಾಗಿರುವುದರಿಂದ ಈ ಜಿಲ್ಲೆಯಲ್ಲಿ ಹಾಗೂ ಆ ಮಲೆನಾಡಿನಲ್ಲಿ ಬಳಕೆಯಲ್ಲಿರುವ ಅನೇಕ ‘ದೇಸಿ’ ಪದಗಳನ್ನು ನಾನು ಬಳಸಿಕೊಂಡಿದ್ದೇನೆ. ಕರ್ನಾಟಕದ ಇನ್ನಿತರ ಭಾಗಗಳ ಜನರೂ ಅವುಗಳನ್ನು ಅರಿತುಕೊಳ್ಳಲೆತ್ನಿಸುವುದು ಅನುಚಿತವಲ್ಲ.

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳವರು ಈ ಕಾದಂಬರಿಗೆ ಅಮೂಲ್ಯವಾದ ‘ಮುನ್ನುಡಿ’ ಯನ್ನು ಬರೆದಿದ್ದಾರೆ. ಉಪಾಧ್ಯಾಯ ವೃತ್ತಿಯಿಂದ ನಿವೃತ್ತನಾದ ಗೋವಿಂದರಾಯ ಎಂಬವನೊಬ್ಬನು ತುಳುನಾಡಿನ ಕರನಾಡಿನ ಉಡುಪಿಯ ನೆರೆಯ ಬೈಲೂರಲ್ಲಿ ಇದ್ದ ತನ್ನ ಮನೆಯನ್ನು ಬಿಟ್ಟು ಪಶ್ಚಿಮ ಘಟ್ಟಗಳ ತೀರ ಉಪತ್ಯಕಾ ಪ್ರದೇಶದಲ್ಲಿ ತುಳುನಾಡಲ್ಲೇ ಉಳ್ಳ ಬಂಗಾಡಿಯಲ್ಲಿ ನೆಲೆಸಿ ಅಲ್ಲಿಯ ಕಾಡನ್ನು ಹಸನಾಗಿ ಆರಂಭ ಮಾಡಿ, ಏನೂ ಬೆಳೆಯದ ಆ ಬಂಜರಲ್ಲಿ ಹುಲುಸಾದ ಬೈಲು, ಬೆಟ್ಟು, ಬಾಗ್ಯಾತುಗಳನ್ನು ನಿರ್ಮಿಸಿದ ಕಥೆ. ಸಂಜೆಯ ನಡುಕೋಣೆಯಲ್ಲಿ ಹಚ್ಚಿಸಿಟ್ಟ ಒಂದು ಬತ್ತಿಯ ದೀಪದಂತೆ, ಕಥೆಯ ತುಂಬಾ ಬೆಳಕೆಂದರೆ ಗೋವಿಂದರಾಯನೇ. ಮಿಕ್ಕವರು ಆ ಬೆಳಕಿನಲ್ಲಿ ತೋರಿ ಮಾಚುವ ನೆರಳುಗಳು. ಅವರಲ್ಲಿ ಹೆಚ್ಚು ಕಡಮೆ ಆ ಬೆಳಕಿನಷ್ಟೇ ಉದ್ದದ ನೆರಳೆಂದರೆ ಅವನ ಹೆಂಡತಿ ಸೀತಮ್ಮ. ಉಳಿದವರು ಜಗ್ಗನೆ ಕಾಣುವರು. ಕಂಡಲ್ಲಿಯೆ ಮಾಣುವರು.

ಕೃತಿಯ ‘ಕೃತಜ್ಞತೆ’ಯಲ್ಲಿ ಹರಿದಾಸರಾಯರ ಸುಪುತ್ರ ಡಾ। ರಮಾಕಾಂತರಾವ್ ಅವರ ಕೆಲವು ಮಾತುಗಳು–‘ಬಾಳಿನ ಗಿಡ’ ಕೃತಿಯು ನಮ್ಮ ತಂದೆ ಮಾರ್ಪಳ್ಳಿ ಹರಿದಾಸರಾಯರು ಎಪ್ಪತ್ತು ವರ್ಷದ ಹಿಂದೆ ಬರೆದ ಕಾದಂಬರಿ. ಅವರು ಮೂಲತಃ ದಕ್ಷಿಣ ಕನ್ನಡದವರಾಗಿದ್ದು ಸಾಹಿತ್ಯದಲ್ಲಿ ಆಸಕ್ತಿ ಇದ್ದುದರಿಂದ ಪತ್ರಿಕೋದ್ಯಮವನ್ನು ಅವಲಂಬಿಸಲು ಅವರು ಹುಬ್ಬಳ್ಳಿಗೆ ತೆರಳಿ ಹಲವಾರು ಲೇಖನಗಳನ್ನು, ಇಪ್ಪತ್ತಕ್ಕೂ ಹೆಚ್ಚು ಕಥೆ ಕಾದಂಬರಿಗಳನ್ನು ಬರೆದು ಪ್ರಕಟಿಸಿದರು..........ನಮ್ಮಲ್ಲಿ ಮೊದಲಿಗನಾದ ನಾನು ರಮಾಕಾಂತರಾವ್, ಎಂ.ಬಿ.ಬಿ.ಎಸ್., ಎಂ.ಡಿ. ಮುಗಿಸಿ ಮಿಲಿಟರಿ ಸರ್ವೀಸಿನಲ್ಲಿದ್ದು, ನಿವೃತ್ತಿ ಹೊಂದಿ ಪೂನಾದಲ್ಲಿ ವಾಸವಾಗಿದ್ದೇನೆ. ನನ್ನ ತಮ್ಮ ಅಶೋಕ ಕುಮಾರ್ ಬಿ.ಟೆಕ್., ಎಂ.ಟೆಕ್. ಮುಗಿಸಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರೊಫೆಸರ್ ಹುದ್ದೆಯಲ್ಲಿದ್ದು, ನಿವೃತ್ತಿ ಹೊಂದಿ ಸಿಕಂದರಾಬಾದಿನಲ್ಲಿ ವಾಸವಾಗಿದ್ದಾನೆ. ನಮ್ಮ ತಾಯಿ ಕೃಷ್ಣಬಾಯಿಯವರು ಜೀವನದಿಂದಲೇ ನಿವೃತ್ತರಾಗಿದ್ದಾರೆ......... ಈಗ ಐವತ್ತು ವರ್ಷಗಳ ನಂತರ ಪುನಃ ಮುದ್ರಣವಾಗುವುದಕ್ಕೆ ಓರ್ವ ವ್ಯಕ್ತಿಯ ಅಸಾಧಾರಣ ಪ್ರಯತ್ನ ಮತ್ತು ಸಂಕಲ್ಪ ಕಾರಣವಾಗಿದೆ ಎಂದು ಹೇಳಲು ತುಂಬಾ ಸಂತೋಷ ಪಡುತ್ತೇನೆ. ಅವರೇ ಶ್ರೀ ಬೈಲಕೆರೆ ಗೋವಿಂದ ರಾವ್. ಅವರು 1974 ರಲ್ಲಿ ಶಿವಮೊಗ್ಗದಲ್ಲಿದ್ದಾಗ ಅವರ ಮಡದಿ ಅರುಂಧತಿ ‘ಬಾಳಿನ ಗಿಡ’ ಓದಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದರು. ಅದನ್ನು ಓದಿ ಅವರಿಬ್ಬರು ತುಂಬಾ ಉತ್ತಮ ಕೃತಿಯೆಂದು ಸಂತೋಷಪಟ್ಟರು. ಶ್ರೀ ಬೈಲಕೆರೆ ಗೋವಿಂದರಾಯರ ಪ್ರಯತ್ನದಿಂದ ಹಾಗೂ ಶ್ರೀ ರಾಜ (ಸಾಹಿತ್ಯ ಭಂಡಾರ, ಬೆಂಗಳೂರು) ಅವರ ಅನನ್ಯ ಪ್ರೋತ್ಸಾಹದಿಂದ ಐವತ್ತು ವರ್ಷಗಳ ಬಳಿಕ ಈಗ ‘ಬಾಳಿನ ಗಿಡ’ 8ನೇ ಮುದ್ರಣವಾಗುತ್ತಿರುವುದು ನಮಗೆ ಅತ್ಯಂತ ಸಂತೋಷವನ್ನುಂಟು ಮಾಡುತ್ತಿದೆ. ನಮ್ಮ ಪೂಜ್ಯ ತಂದೆಯವರ ಬರವಣಿಗೆ ಇಂದಿನ ಪೀಳಿಗೆಗೆ ಪರಿಚಯವಾಗುತ್ತಿರುವುದು ಹೆಮ್ಮೆಯ ವಿಷಯ.

ಜಗಲಿಯಲ್ಲೇ ಗೋಡೆಗೊರಗಿ ಕನ್ನಡಕ ಹಾಕಿಕೊಂಡು ಏನನ್ನೋ ಓದುತ್ತಾ ಕುಳಿತಿದ್ದ ಗೋವಿಂದರಾಯರಿಗೆ ಹೆಂಡತಿಯ ಮಾತು ಕೇಳಿ ನಗು ಬಂತು. ‘ಹಾಂ, ಕಾಗೆ ಶುಭಶಕುನದ ಪಕ್ಷಿ! ಅದರ ಅಂದ ಚಂದ ಬಣ್ಣಿಸಿ ಫಲವಿಲ್ಲ! ತೇಟ್ ಮದಿವಾಳ್ ಪಕ್ಷಿ!...... ಸೀತಮ್ಮನವರು ಮಾತ್ರ ಕಣ್ಣೀರು ಸುರಿಸಲಾರಂಭಿಸಿದರು. ನಮ್ಮ ಕುಟುಂಬದಲ್ಲಿ ಯಾರು ಜೈಲಿಗೆ ಹೋಗಿಲ್ಲ. ಅವನು ದುಡುಕಿ ಎಂಥ ಕಾರ್ಯಕ್ಕೆ ಕೈಯಿಕ್ಕಿದ! ಇನ್ನು ಅವನಿಗೆ ಯಾರು ಹೆಣ್ಣು ಕೊಡುತ್ತಾರೆ – ಇವು ಉದಾಹರಣೆಗಾಗಿ ಕಾದಂಬರಿಯಲ್ಲಿ ಬರುವ ಸ್ವಾರಸ್ಯ ಮತ್ತು ವ್ಯಂಗ್ಯ ತುಂಬಿದ ಮಾತುಗಳು – ಇದು ಜೈನ ಬಸದಿ ಎಂದು ರಾಜ ಹೇಳಿದ. ಇತಿಹಾಸವು ಗೋವಿಂದರಾಯರ ಸ್ಮರಣೆಗೆ ಬಂತು. ಬಂಗಾಡಿ ಅದರ ರಾಜಧಾನಿ ಎಂದು ಇದೆ ಇತಿಹಾಸದಲ್ಲಿ. ಪ್ರಾಯಶಃ ಇದೇ ಇರಬೇಕೆಂದು ಅವರು ಊಹಿಸಿದರು–ಅಪ್ಪಯ್ಯ, ಬ್ರಿಟಿಷರು ನಮಗೆ ಸ್ವರಾಜ್ಯ ಕೊಡುವರಂತೆ. ಸ್ವಾತಂತ್ರ್ಯ ಬಂತು, ಬಂತು! – ರಾಜಾ, ನಾನಿನ್ನು ಬದುಕುವುದಿಲ್ಲ............ರಾಮ ರಾಮ ಸೀತಾ ಎಂಬುದೇ ಅವರ ಕೊನೆಯ ಉಚ್ಚಾರವಾಯಿತು. ಮತ್ತೆ ಮೌನ.

ಕಾದಂಬರಿಯ ಹನ್ನೆರಡು ಅಧ್ಯಾಯಗಳನ್ನು ಹನ್ನೆರಡು ದಿನಗಳಲ್ಲಿ ಬರೆದು ಮುಗಿಸಲಾಯಿತು. ಮುಂದಿನ ಅಧ್ಯಾಯ ಬರೆದಾಗ ಹಿಂದಿನದು ಮುದ್ರಣವಾಯಿತು. ಈ ಕಾದಂಬರಿಯನ್ನು ವಿಶ್ವವಿದ್ಯಾನಿಲಯ ತನ್ನ 1955–1958ರ ಇಂಟರ್‌ಮೀಡಿಯೇಟ್ ಪರೀಕ್ಷೆಗೆ ಪಠ್ಯಪುಸ್ತಕವಾಗಿ ಸ್ವೀಕರಿಸಿತು. ಕನ್ನಡ ಸಾಹಿತ್ಯ ಪರಿಷತ್ತು ಆ ವರುಷದ ಜಾಣ ಪರೀಕ್ಷೆಗೆ ಪಠ್ಯಪುಸ್ತಕವನ್ನಾಗಿ ಮಾಡಿತು. 1959–60ರ ಬಿ.ಎ., ಬಿ.ಎಸ್.ಸಿ. ಪರೀಕ್ಷೆಗಳಿಗೆ ಈ ಪುಸ್ತಕವನ್ನು ಪಠ್ಯವೆಂದು ವಿಶ್ವವಿದ್ಯಾನಿಲಯ ಗೊತ್ತು ಮಾಡಿತು.

ಮಾವಿನ ಎಲೆ, ಗೇರು ಎಲೆ ಹಲ್ಲುಜ್ಜಲು ಉಪಯೋಗಿಸುತ್ತಿದ್ದ ಬಹಳ ಹಿಂದಿನ ಕಾಲದ ಅಂದರೆ ಸುಮಾರು ಎಪ್ಪತ್ತೈದು ವರ್ಷಗಳ ಹಿಂದಿನ ಅದ್ಭುತ ಕಾದಂಬರಿ ಇದು. ಕಾದಂಬರಿಯನ್ನು ಓದುತ್ತಾ ಹೋದ ಹಾಗೆ ಆ ಕಾಲದ ಭಾಷೆ, ಜೀವನ ಮೌಲ್ಯಗಳು, ಬಡತನದ ಬದುಕು, ವಿದ್ಯಾಭ್ಯಾಸ, ಅಪ್ಪ ಅಮ್ಮ ಮಕ್ಕಳ ಸಂಬಂಧ ಎಲ್ಲವೂ ಹೊಚ್ಚ ಹೊಸದಾದ ಹಳೆ ಕಥೆಯನ್ನು ಗ್ರಹಿಸಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ಸಮಾಜದ ಮೇಧಾವಿ ವ್ಯಕ್ತಿ ಬರೆದ ಕಾದಂಬರಿ ‘ಬಾಳಿನ ಗಿಡ’ ನಾವೆಲ್ಲರೂ ಓದಲೇಬೇಕಾದ ಅತ್ಯುತ್ತಮ ಕಾದಂಬರಿ. ಆದ್ದರಿಂದ ಈ ಕೃತಿಯ ಎಂಟನೆಯ ಮುದ್ರಣದ ಕೃತಿಯನ್ನು ಕಳುಹಿಸಿದ ಶ್ರೀ ಬೈಲಕೆರೆ ಗೋವಿಂದ ರಾವ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.


## ಶ್ರೀ ಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು, ಶ್ರೀ ಪಿ. ಪ್ರಭಾಕರ ಭಂಡಿ

## ಶುಭ ವಿವಾಹ

ಶ್ರೀಮತಿ ಯಶೋಧ ಮತ್ತು ಶ್ರೀ ಪೂವಂದೂರು ರಾಮಕೃಷ್ಣಯ್ಯ ಅವರ ಪುತ್ರ **ಚಿ. ಶಿವಪ್ರಸಾದ್** ಹಾಗೂ ಶ್ರೀಮತಿ ರೇಖಾ ಮತ್ತು ಶ್ರೀ ಪರಾರಿ ಪ್ರದೀಪ್ ವಿ. ರಾವ್ ಅವರ ಪುತ್ರಿ **ಚಿ.ಸೌ. ಸೌಂದರ್ಯಲಕ್ಷ್ಮಿ** ಇವರ ವಿವಾಹವು ತಾ.13.01.2023ನೇ ಶುಕ್ರವಾರದಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಜರಗಿತು.

★★★★ ★★★★

ಡಾ. ಶ್ರೀಮತಿ ಅಪರ್ಣಾ ಸುರೇಂದ್ರ ಮತ್ತು ಶ್ರೀ ಕೆ.ಎಸ್.ಸುರೇಂದ್ರ ಅವರ ಪುತ್ರಿ **ಚಿ.ಸೌ. ಮೋಹಶ್ರೀ** ಹಾಗೂ ಶ್ರೀಮತಿ ಕಂಠಿ ಮತ್ತು ಶ್ರೀ ರಾಮಕೃಷ್ಣ ಅವರ ಪುತ್ರ **ಚಿ. ವಿಘ್ನೇಶ್** ಇವರ ವಿವಾಹವು ತಾ.15.01.2023 ರಂದು ಮೈಸೂರಿನ ಶ್ರೀ ಚಿಕ್ಕಮ್ಮನಿಕೇತನ ಸಮುದಾಯ ಭವನದಲ್ಲಿ ಜರಗಿತು.

★★★★ ★★★★

ಶ್ರೀಮತಿ ಮಲ್ಲಿಕಾ ಮತ್ತು ಶ್ರೀ ಬೊಕ್ಕಸ ಗಣೇಶ ರಾವ್ ಅವರ ಸುಪುತ್ರಿ **ಚಿ.ಸೌ. ಮೇಘನಾ** ಹಾಗೂ ಶ್ರೀಮತಿ ರಾಧಿಕಾ ಮತ್ತು ಶ್ರೀ ರಾಜಶೇಖರ ರಾವ್ ಅವರ ಸುಪುತ್ರ **ಚಿ. ರಕ್ಷಿತ್** ಇವರ ವಿವಾಹವು ತಾ.26.01.2023 ರಂದು ಮೂಡುಬಿದಿರೆ ಬನ್ನಡ್ಕ ಶ್ರೀ ಗುರು ರಾಘವೇಂದ್ರ ಮಠದ ಪಾಂಚಜನ್ಯ ಸಭಾಂಗಣದಲ್ಲಿ ಜರುಗಿತು.

★★★★ ★★★★

ಶ್ರೀಮತಿ ಸುಶೀಲಾ ಮತ್ತು ಶ್ರೀ ಆಲಂಕಾರು ವಸಂತಕುಮಾರ್ ಹೆಚ್ ಅವರ ಪುತ್ರ **ಚಿ. ರೈ. ಶ್ರೀಕಾಂತ್ ವಿ.ಹೆಚ್** ಹಾಗೂ ಶ್ರೀಮತಿ ಪ್ರೇಮಲತಾ ಮತ್ತು ಶ್ರೀ ಕಟೀಲು ಬಾಬು ರಾಜೇಂದ್ರ ಪ್ರಸಾದ್ ಅವರ ಪುತ್ರಿ **ಚಿ.ಸೌ. ಶಾರ್ವರಿ** ಅವರ ವಿವಾಹವು ತಾ.26.01.2023 ರಂದು ಕಟೀಲಿನ ಸಾನಿಧ್ಯ ಸಭಾಭವನದಲ್ಲಿ ಜರಗಿತು.

★★★★ ★★★★

ಶ್ರೀಮತಿ ಗಾಯತ್ರಿ ಮತ್ತು ಶ್ರೀ ಶ್ರೀನಿವಾಸ ರಾವ್ ಅವರ ಪುತ್ರ **ಚಿ. ಅಖಿಲ್ ರಾವ್** ಹಾಗೂ ಶ್ರೀಮತಿ ಸುಜಾತಾ ಮತ್ತು ಶ್ರೀ ಗಂಗಾಧರ್ ಪಿ ಅವರ ಪುತ್ರಿ **ಚಿ.ಸೌ. ದೀಕ್ಷಾ** ಅವರ ವಿವಾಹವು ತಾ.27.01.2023 ರಂದು ಕಟೀಲಿನ ಶ್ರೀ ಸಾನಿಧ್ಯ ಕಲ್ಯಾಣ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀನಿವಾಸ ದೇಲಂಪಾಡಿತ್ತಾಯರ ಪೌತ್ರ ಶ್ರೀಮತಿ ಹೇಮಲತಾ ಮತ್ತು ಶ್ರೀ ಅರುಣ್ ಕುಮಾರ್ ರ ಪುತ್ರ **ಚಿ. ಅಕ್ಷಯ್. ಎ.** ಹಾಗೂ ಶ್ರೀಮತಿ ಶೈಲಜಾ ಮತ್ತು ಶ್ರೀ ರಾಜಕುಮಾರ್ ಕೆ. ರಾವ್ ರ ಪುತ್ರಿ **ಚಿ.ಸೌ. ಸಾಗರಿಕಾ** ಇವರ ವಿವಾಹವು ತಾ.27.01.2023ರಂದು ನೀಲಾವರ ಮಧ್ಯಸ್ತರ ಬೆಟ್ಟು "ಶ್ರೀ ಶಾರದಾ ಸಭಾಭವನ"ದಲ್ಲಿ ಜರಗಿತು.

## ಉಪನಯನ

ಶ್ರೀಮತಿ ಅಕ್ಷತಾ ಮತ್ತು ಶ್ರೀ ಪವನ್ ಕುಮಾರ್ ಹೆಜಮಾಡಿ ಅವರ ಪುತ್ರ ಚಿ. ಸ್ಕಂದ ಕುಮಾರ್ ಅವರ ಉಪನಯನವು ತಾ.16.01.2023 ರಂದು ಶ್ರೀ ಜ್ಞಾನಶಕ್ತಿ ಮಂಟಪ ಕೋಡಿಗೆಹಳ್ಳಿಯಲ್ಲಿ ಬೆಂಗಳೂರಿನಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ಅಶ್ವಿನಿ ಮತ್ತು ಶ್ರೀ ಮಧು ಅಯ್ಯಂಗಾರ್ ಅವರ ಪುತ್ರ ಹಾಗೂ ಶ್ರೀಮತಿ ಮಂಜುಳಾ ಮತ್ತು ಎಂ.ಎಸ್. ರಾಧಾಕೃಷ್ಣ ರಾವ್ ಅವರ ಮೊಮ್ಮಗ ಚಿ. ವಿಕ್ರಮ್ ಅವರ ಉಪನಯನವು ತಾ.26.01.2023 ರಂದು ಬೆಂಗಳೂರಿನ ಕೋಡಿಗೆಹಳ್ಳಿಯ ಶ್ರೀ ಜ್ಞಾನಶಕ್ತಿ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀಮತಿ ರಶ್ಮಿ ಮತ್ತು ಶ್ರೀ ಸುಹಾಸ್ ರಾವ್ ರ ಪುತ್ರ ಚಿ. ಅಥರ್ವ (ಶ್ರೀಮತಿ ಇಂದಿರಾ ದೇವಿ ಮತ್ತು ಶ್ರೀ ಎಸ್. ದಿವಾಕರ ರಾವ್ ಹಾಗೂ ಶ್ರೀಮತಿ ಇಂದಿರಾ ಮತ್ತು ಶ್ರೀ ಬಿ. ಕೃಷ್ಣಮೂರ್ತಿ ರಾವ್ ರವರ ಮೊಮ್ಮಗ) ನ ಉಪನಯನವು ತಾ.16.01.2023ರಂದು ಉಡುಪಿಯ ಶಾರದಾಮಂಟಪದಲ್ಲಿ ಜರಗಿತು.

★★★★ ★★★★

ಶ್ರೀಮತಿ ರಂಜಿತಾ ರಾವ್ ಮತ್ತು ಶ್ರೀ ರಜತ್ ರಾಜ್ ಪ್ರಕಾಶ್ ರ ಪುತ್ರ ಚಿ. ವಿಹಾನ್ (ಶ್ರೀಮತಿ ಮನೋರಮ ರಾವ್ ಮತ್ತು ಶ್ರೀ ದಿ.ನ. ಎಸ್. ಪ್ರಕಾಶ್  ಹಾಗೂ ಶ್ರೀಮತಿ ವಸುಧ ಮತ್ತು ಶ್ರೀ ಮೋಹನ್ ರಾವ್ ಬೆಳ್ಳೆ ರವರ ಮೊಮ್ಮಗ)ನ ಉಪನಯನ ಸಂಸ್ಕಾರವು ತಾ.05.02.2023ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀಮತಿ ಮೀನಾ ಎಸ್.ರಾವ್ ಮತ್ತು ಶ್ರೀ ಸದಾನಂದ ರಾವ್ ಪಡುಬೆಳ್ಳೆ ಇವರ ಸುಪುತ್ರ ಚಿ. ಶ್ರವಣನ ಬ್ರಹ್ಮೋಪದೇಶವು ತಾ.29.12.2023 ರಂದು ಪಡುಬೆಳ್ಳೆ ಪಾಜಕ ಕ್ಷೇತ್ರದ "ವ್ಯಾಸಮಧ್ವ ಸಭಾಭವನ"ದಲ್ಲಿ ಜರಗಿತು.

★★★★ ★★★★

ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಹರ್ಷಕುಮಾರ್ ಕೇದಗೆ ಅವರ ಪೌತ್ರ, ಶ್ರೀಮತಿ ಸ್ವಾತಿ ಮತ್ತು ಶ್ರೀ ಪ್ರಮೋದ ಕುಮಾರ್ ಇವರ ಪುತ್ರ ಚಿ. ಹಾರ್ದಿಕ್ ಕುಮಾರನಿಗೆ ಬ್ರಹ್ಮೋಪದೇಶ ಕಾರ್ಯಕ್ರಮವು ತಾ.10.02.2023ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಧನದಲ್ಲಿ ಗುರುಹಿರಿಯರ ಸಮಕ್ಷಮದಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ವಸಂತಿ ಮತ್ತು ಕೀ. ಶೇ. ಎ.ಕೆ. ಲಕ್ಷ್ಮೀನಾರಾಯಣ ಅವರ ಪೌತ್ರ, ಶ್ರೀಮತಿ ಅಂಬಿಕಾ ಮತ್ತು ಶ್ರೀ ರಾಮಪ್ರಸಾದ್ ಇವರ ಪುತ್ರ ಚಿ. ಆಕಾಂಕ್ಷನಿಗೆ ಬ್ರಹ್ಮೋಪದೇಶ ಕಾರ್ಯಕ್ರಮವು  ತಾ.09.02.2023ರಂದು ಸುಳ್ಯ ಅಡ್ಕರ್ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಕಾರ್ತಿಕೇಯ ಸಭಾಂಗಣದಲ್ಲಿ ಗುರುಹಿರಿಯರ ಸಮಕ್ಷಮದಲ್ಲಿ ನೆರವೇರಿತು.

## ಶುಭ ಜನನ

ಶ್ರೀಮತಿ ಪ್ರತೀಕ್ಷಾ ಮತ್ತು ಶ್ರೀ ಚಿತ್ರಾಪುರ ಶ್ರೇಯಸ್ ಅವರು ತಾ.21–01–2023 ರಂದು ಡಲ್ಲಾಸ್ ಗಖಂ ನಲ್ಲಿ ಗಂಡು ಮಗುವಿಗೆ ಜನನ ನೀಡಿದರು.

# ಹರಿಕಥೆಯ ದಂತಕಥೆ ಪದ್ಮಾವತಿ ಬಾಯಿ ಸಿದ್ಧಿಸಾಧನೆ ಯುವ ಜನಾಂಗಕ್ಕೆ ಸ್ಫೂರ್ತಿ – ಮುಳಿಯ ಕೇಶವ ಪ್ರಸಾದ್





ಹರಿಕೀರ್ತನಾ ಕ್ಷೇತ್ರದಲ್ಲಿ ದಂತಕಥೆಯಾಗಿ ತನ್ನ ಬಾಲ್ಯದ ಬದುಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪೂಜ್ಯ ಮಂಜಯ್ಯ ಹೆಗ್ಗಡೆಯವರ ಕಾಲದಲ್ಲಿ ಸೀತಾ ಕಲ್ಯಾಣ ಹರಿಕಥ ಸೇವೆ ಮಾಡಿ ಪೂಜ್ಯರಿಂದ ಚಿನ್ನದ ಗುಲಾಬಿ–ಚೂಡಾಮಣಿಯಿಂದ ಆಶೀರ್ವಾದಿಸಲ್ಪಟ್ಟಿದ್ದರು. ಶ್ರೀ ಕ್ಷೇತ್ರ ಪೊಳಲಿಯಲ್ಲಿ 2ಅಣೆ ಟಿಕೆಟ್ ಮಾರಾಟ ಆದಾಯದಿಂದ 1ಅಣೆಯನ್ನು ಪೊಳಲಿ ವಿದ್ಯಾ ವಿಲಾಸ ಮತ್ತು ಗುರುಪುರ ಪೊಳಲಿ ಖಾಸಗಿ ರಸ್ತೆಯ ದುರಸ್ತಿ ಬಗ್ಗೆ ವಿನಿಯೋಗಿಸಲ್ಪಟ್ಟಿರುವುದು ಅವರ ಸಾಮಾಜಿಕ ಕಳಕಳಿಗೆ ನಿದರ್ಶನವಾಗಿರುತ್ತದೆ. ಇವರ ಸಿದ್ಧಿ–ಸಾಧನೆ ಯುವ ಜನಾಂಗಕ್ಕೆ ಸ್ಪೂರ್ತಿಯಾಗಬೇಕೆಂದು ಪುತ್ತೂರು ಶ್ರೀ ಮಹಾಲಿಂಗೇಶ್ವರದ ಆಡಳಿತ ಧರ್ಮದರ್ಶಿ ಶ್ರೀ ಕೇಶವ ಪ್ರಸಾದ್ ಮುಳಿಯ ಅವರು ಪದ್ಮಾವತಿ ಪುತ್ರಿ ವಿಜಯಲಕ್ಷ್ಮೀ ನಂದಳಿಕೆ ಮತ್ತು ಮೊಮ್ಮಗಳು ಸೌಜನ್ಯ ನಂದಳಿಕೆ ಸಂಪಾದಿಸಿದ "ಶತದಳಪದ್ಮ" ಸಂಸ್ಮರಣ ಗ್ರಂಥವನ್ನು ಹಾಗೂ ಬೆಳ್ಳಿ ನಾಣ್ಯ ಹಾಗೂ ಶೇಣಿ ಮುರಳಿ ನಿರ್ದೇಶಿಸಿದ ಹರಿಕಥೆಯ ದಂತಕಥೆ ಪದ್ಮಾವತಿ ಬಾಯಿ ಸಾಕ್ಷಚಿತ್ರ ಲೋಕಾರ್ಪಣೆ ಮಾಡಿ ಉದ್ಘಾಟನಾ ಭಾಷಣ ಮಾಡಿದರು.

ಪುತ್ತೂರು ಅಂಚೆ ಕಛೇರಿಯ ಹಿರಿಯ ಅಧೀಕ್ಷಕಿ ಡಾ. ಎಂಜಲ್ ರಾಜ್ ಅವರು ಭಾರತ ಸರಕಾರದ ಅಂಚೆ ಇಲಾಖೆ ಮಾನ್ಯತೆಯ ವಿಶೇಷ ಅಂಚೆ ಲಕೋಟೆ, "ಮೈ ಸ್ಟಾಂಪ್" ಗೌರವ ಅಂಚೆ ಚೀಟಿ ಅನಾವರಣಗೈದರು. ಹರಿಕಥಾ ಕ್ಷೇತ್ರದಲ್ಲಿ ಬಾಲ್ಯದ ದಿನಗಳಲ್ಲಿ ಅನುಪಮ ಸಾಧನೆ ಮಾಡಿ ಡಾ. ಶಿವರಾಮ ಕಾರಂತರಿಂದ ಭದ್ರಗಿರಿ ಅಚ್ಯುತ ದಾಸರಿಂದ ಪ್ರಶಂಸಿಲ್ಪಟ್ಟ ಪದ್ಮಾವತಿಯವರ ವಿಶೇಷ ಅಂಚೆ ಲಕೋಟೆ ಪುತ್ತೂರು ಅಂಚೆ ಕಛೇರಿಯಲ್ಲಿ ಬಿಡುಗಡೆಯಾಗುತ್ತಿರುವುದು ನಮಗೆಲ್ಲಾ ಹೆಮ್ಮೆಯ ಅಭಿಮಾನದ ಸಂಗತಿಯೆಂದರು.

ಅಧ್ಯಕ್ಷತೆವಹಿಸಿದ ಪುತ್ತೂರು ಪುರಸಭೆಯ ಅಧ್ಯಕ್ಷ ಶ್ರೀ ಜೀವಂದರ ಜೈನ್ ಮಾತನಾಡಿ ಇಂತಹ ಸಾಧಕರ ಮಾರ್ಗ ಎಂದು ನಾಮಕರಣ ಮಾಡಲು ಪುರಸಭೆ ಹೆಮ್ಮೆ ಪಡುತ್ತಿದೆ ಎಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕೊಂಬೆಟ್ಟು ವಾರ್ಡ್‌ನ ಕಾರ್ಪೋರೇಟರ್ ಪಿ.ಜೆ. ಜಗನ್ನಿವಾಸ ರಾವ್ ಹಾಗೂ ಹಿರಿಯ ಚೆಂಡೆ ವಾದಕ ಪದ್ಯಾಣ ಶಂಕರ್ ನಾರಾಯಣ ಭಟ್ ಅವರು "ಹರಿಕೀರ್ತನಾ ವಿದುಷಿ ಎಂ. ಪದ್ಮಾವತಿ ಎಸ್.ರಾವ್ ಮಾರ್ಗ" ನಾಮಫಲಕವನ್ನು ಅನಾವರಣಗೈದರು. ಪದ್ಮಾವತಿ ಎಸ್. ರಾವ್ ಅವರ ಹಿರಿಯ ಪುತ್ರ, ಸಹೋದರರು, ಸಹೋದರಿಯರು, ಮೊಮ್ಮಕ್ಕಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಇಲಾಖಾ ವತಿಯಿಂದ ಹಿರಿಯ ಪುತ್ರ ಎಂ.ಗಂಗಾಧರ ರಾವ್ ಅವರನ್ನು ಶಾಲು ಹೊದಿಸಿ, ಪೇಟ ತೊಡಿಸಿ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ವಿಶೇಷ ಅಂಚೆ ಲಕೋಟೆ ಮೈ ಸ್ಟಾಂಪ್ ಗೌರವ, ಬೆಳ್ಳಿ ನಾಣ್ಯ, ಸಾಕ್ಷಚಿತ್ರ ಹಾಗೂ ಶತದಳಪದ್ಮ ಸಂಸ್ಕರಣಾ ಗ್ರಂಥದ ಸಂಪಾದಕಿಯಾಗಿ ವಿಶೇಷವಾಗಿ ಶ್ರಮಿಸಿದ ಪದ್ಮಾವತಿ ಪುತ್ರಿ ಶ್ರೀಮತಿ ವಿಜಲಕ್ಷ್ಮೀ ನಂದಳಿಕೆ, ಮೊಮ್ಮಗಳು ಸೌಜನ್ಯ ನಂದಳಿಕೆ ಅವರನ್ನು ಕುಟುಂಬದ ಸದಸ್ಯರ ಸಮಕ್ಷಮದಲ್ಲಿ ಚಿನ್ನದ ಉಂಗುರ ನೀಡಿ ಸನ್ಮಾನಿಸಲಾಯಿತು.

ಪುತ್ರರಾದ ಎಂ. ಶಾಂತರಾಮ್ ರಾವ್ ಸ್ವಾಗತಿಸಿದರು. ಎಂ. ಚಂದ್ರಶೇಖರ್ ರಾವ್ ಸಂದೇಶವಾಚನಗೈದರು. ವಿಜಯಲಕ್ಷ್ಮೀ ನಂದಳಿಕೆ ಹಾಗೂ ಸೌಜನ್ಯ ನಂದಳಿಕೆ ಹರಿಕಥಾಶೈಲಿ ಪ್ರಾರ್ಥನೆಗೈದರು. ಹಿರಿಯ ಪುತ್ರಿ ಶ್ರೀಮತಿ ಜಾನಕಿ ರಾಮಸ್ವಾಮಿ ಹಾಗೂ ಮೊಮ್ಮಗ ಮಹೇಶ್ ಮಾರ್ಪಳ್ಳಿ ಅತಿಥಿಗಳನ್ನು ಗೌರವಿಸಿದರು. ಪುತ್ರ ಡಾ. ಎಂ. ರಾಮಕೃಷ್ಣ ರಾವ್ ವಂದಿಸಿದರು. ಅಳಿಯ ನಂದಳಿಕೆ ಬಾಲಚಂದ್ರ ರಾವ್ ಹಾಗೂ ಪುತ್ರ ಡಾ.ಎಂ. ಗುರುಪ್ರಸಾದ್ ರಾವ್ ಕಾರ್ಯಕ್ರಮ ನಿರೂಪಿಸಿದರು.

**– ನಂದಳಿಕೆ ಬಾಲಚಂದ್ರ ರಾವ್**

*With Best Complimemts From*

**SRI M. SHAILESH RAO**  Ph : 9448624324

B.E., Civil

**Civil Engineer & Contractor**

**SRI MALAVIKA ASSOCIATES**

KALSANKA-UDUPI ROAD, UDUPI.

**Website : shreemaalavikaassociates.com**



## ನಿಧನ



ಮುಂಬೈನ ದಿವಂಗತ ಶ್ರೀ ಜಂಬೆ ಶ್ರೀರಾಮ ಹೆಬ್ಬಾರ್ ಅವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ಹೆಬ್ಬಾರ್ ಅವರು ತಮ್ಮ 73ನೇ ವರ್ಷ ವಯಸ್ಸಿನಲ್ಲಿ ತಾ.12–01–2023 ರಂದು ನಂದಳಿಕೆಯಲ್ಲಿ ನಿಧನರಾದರು. ಇವರು ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ಶ್ರೀ ನೆಡ್ಯಾಳ ಭಾಸ್ಕರ ರಾವ್ ಅವರು ತಮ್ಮ 75ನೇ ವರ್ಷ ವಯಸ್ಸಿನಲ್ಲಿ 25.01.2023 ರಂದು ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ನಂದಳಿಕೆ ಬಡಗುಮನೆ ಫ್ಯಾಮಿಲಿಯ ಶ್ರೀಮತಿ ಸುಮತಿ ಸುಂದರ ರಾವ್ ಅವರು ತಮ್ಮ 84ನೇ ವಯಸ್ಸಿನಲ್ಲಿ ತಾ.01.02.2023 ಬಜಗೋಳಿ, ಕಾರ್ಕಳ ಇಲ್ಲಿಯ ತಮ್ಮ ಸ್ವಗ್ರಹದಲ್ಲಿ ನಿಧನರಾದರು. ಇವರು ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ಶ್ರೀ ಮಂಜುನಾಥ ಹೊಳ್ಳರವರ ಪತ್ನಿ ಪ್ರೊ. ಶ್ರೀಮತಿ ಸೀತಾರತ್ನ ಕುಕ್ಕಿಕಟ್ಟೆ ಇವರು ತಮ್ಮ 71ನೇ ವಯಸ್ಸಿನಲ್ಲಿ ತಾ.30.01.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರು ಪತಿ, ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ಶ್ರೀಮತಿ ಅಮಿತಾ ಜೋಶಿಯವರು ತಮ್ಮ 66ನೇ ವಯಸ್ಸಿನಲ್ಲಿ ತಾ.30.01.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರು ಪತಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★



ಶ್ರೀ ಶ್ರೀನಿವಾಸ ಶಾನುಭಾಗ ಕಳತ್ತೂರು ಅವರು ತಮ್ಮ 91ನೇ ವಯಸ್ಸಿನಲ್ಲಿ ತಾ.02.02.2023 ರಂದು ನಾಸಿಕ್‌ನಲ್ಲಿ ನಿಧನರಾದರು. ಇವರು ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿರುತ್ತಾರೆ.

★★★★ ★★★★



ದಿ. ಹರೀಶ್ಚಂದ್ರ ರಾವ್ ಎಲ್ಲೂರು ಅವರ ಪುತ್ರ ಪ್ರಶಾಂತ್ ರಾವ್ ಅವರು ತಮ್ಮ 58ನೇ ವಯಸ್ಸಿನಲ್ಲಿ ತಾ.11.02.2023 ರಂದು ಸ್ವಗ್ರಹದಲ್ಲಿ ನಿಧನರಾದರು. ಅವಿವಾಹಿತರಾಗಿದ್ದ ಇವರು ನಾಲ್ವರು ಸಹೋದರರು, ಮೂವರು ಸಹೋದರಿಯರನ್ನು ಅಗಲಿರುತ್ತಾರೆ.

★★★★ ★★★★



ಹಿರಿಯ ಯಕ್ಷಗಾನ ಕಲಾವಿದ ಜಂಬೂರು ರಾಮಚಂದ್ರ ಶಾನುಭಾಗ್ ಅವರು ತಮ್ಮ 83ನೇ ವಯಸ್ಸಿನಲ್ಲಿ ತಾ.05.02.2023 ರಂದು ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಮಂದಾರ್ತಿ, ಮಾರಣಕಟ್ಟೆ, ಅಮೃತೇಶ್ವರಿ, ಇಡಗುಂಜಿ, ಪೆರ್ಡೂರು ಮುಂತಾದ ಮೇಳಗಳಲ್ಲಿ ಸುಮಾರು ಐದೂವರೆ ವರ್ಷಗಳ ಕಾಲ ಕಲಾಸೇವೆಗೈದಿರುವ ಇವರು ನಮ್ಮ ಸಮಾಜದ ಹೆಮ್ಮೆಯ ಯಕ್ಷಗಾನ ಕಲಾವಿದರಾಗಿದ್ದಾರೆ.

★★★★ ★★★★



ದಿವಂಗತ ಎನ್. ಪದ್ಮರಾಜ್ ರಾವ್ ಅವರ ಪತ್ನಿ ಶ್ರೀಮತಿ ಸುಮತಿ ಪದ್ಮರಾಜ್ ರಾವ್ ಅವರು ತಮ್ಮ 75 ನೇ ವರ್ಷ ವಯಸ್ಸಿನಲ್ಲಿ ತಾ.15.01.2023ರಂದು ಪಡುಬಿದ್ರಿಯಲ್ಲಿ ನಿಧನರಾದರು. ಇವರು ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿರುತ್ತಾರೆ. ಅವರು ಹುಬ್ಬಳ್ಳಿಯಲ್ಲಿ ಹೈಸ್ಕೂಲ್ ಮುಖ್ಯೋಪಾಧ್ಯಾಯಿನಿಯಾಗಿದ್ದರು ಮತ್ತು ಅವರ ಪತಿ ಅದೇ ಊರಿನ ಐಟಿಐನಲ್ಲಿ ಪ್ರಾಂಶುಪಾಲರಾಗಿದ್ದರು. ಅವರು ಉಡುಪಿಯ ಒಳಕಾಡು ರಂಗರಾವ್ ಅವರ ಪುತ್ರಿ.

PRODUCTS ARE AVAILABLE AT ATTRACTIVE DISCOUNT PRICES

BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.11-03-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.15-03-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.24-02-2023 ಮತ್ತು ತಾ.12-03-2023 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಕುಂಭ ಮಾಸದ ವಿಶೇಷ ದಿನಗಳು

| | | | |
|---|---|---|---|
| 13.02.2023 | ಕುಂಭ ಸಂಕ್ರಮಣ | 03.03.2023 | ಸರ್ವೈಕಾದಶಿ |
| 16.02.2023 | ಸಾರ್ತೈಕಾದಶೀ | 07.03.2023 | ಹುಣ್ಣಿಮೆ, ಹೋಲಿಕಾ–ಕಾಮದಹನ |
| 17.02.2023 | ಭಾವೈಕಾದಶೀ– ವೈಷ್ಣವೈಕಾದಶೀ | 08.03.2023 | ಶಿಶಿರ ಋತು ಫಾಲ್ಗುಣ ಮಾಸದ ಕೃಷ್ಣ ಪಕ್ಷಾರಂಭ |
| 18.02.2023 | ಮಹಾಶಿರಾತ್ರಿ | | |
